# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | : 521(698) |
| ಮಾನ್ಯ ಸದಸ್ಯರ ಹೆಸರು: | ಡಾ: ಧನಂಜಯ ಸರ್ಜಿ (ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು: | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು |
| ಉತ್ತರಿಸಬೇಕಾದ ದಿನಾಂಕ: | 22.07.2024. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | 2016ರಲ್ಲಿ ನೇಮಕವಾದ ಜಿಪಿಟಿ ಶಿಕ್ಷಕರು ಹಾಗೂ ನಂತರ ನೇಮಕವಾದ ಜಿಪಿಟಿ ಶಿಕ್ಷಕರ ನಡುವೆ ತಾಲ್ಲೂಕಿನ ಹೊರಗಿನ ವರ್ಗಾವಣೆಗೆ ವಿಧಿಸಿರುವ ನಿಬಂಧನೆಗಳಲ್ಲಿ ಯಾವುದಾದರು ವ್ಯತ್ಯಾಸ ಇವೆಯೇ; ವ್ಯತ್ಯಾಸಗಳಿದ್ದಲ್ಲಿ, ಕಾರಣಗಳೇನು ಹಾಗೂ ಒಂದೇ ವೃಂದದ ನೌಕರರ ಘಟಕದ ಹೊರಗಿನ ವರ್ಗಾವಣೆಯಲ್ಲಿ ಎರಡು ರೀತಿಯ ಮಾನದಂಡ ಅನುಸರಣೆ ಸಮರ್ಪಕವಾದುದೇ; ಅಸಮರ್ಪಕತೆ ಇದ್ದಲ್ಲಿ, ಇದನ್ನು ಪರಿಹರಿಸಲು ತೆಗೆದುಕೊಂಡಿರುವ ಕ್ರಮಗಳಾವುವು; | ಹೌದು<br><br>ಕೆ.ಎ.ಟಿ. ಅರ್ಜಿ ಸಂಖ್ಯೆ: 5957/2021ರಲ್ಲಿ ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ದಿನಾಂಕ: 10.01.2022 ರಂದು ನೀಡಿರುವ ತೀರ್ಪಿನಂತೆ ಶಿಕ್ಷಕರ ನೇಮಕಾತಿ ಆದೇಶದಲ್ಲಿರುವ ಷರತ್ತನ್ನು ಪಾಲಿಸಿ ವರ್ಗಾವಣೆ ಮಾಡಲಾಗುತ್ತಿದೆ.<br><br>ವರ್ಗಾವಣೆಯಲ್ಲಿನ ಅಸಮರ್ಪಕತೆಯನ್ನು ನಿವಾರಿಸಲು ವರ್ಗಾವಣಾ ಕಾಯ್ದೆಯಲ್ಲಿ ತಿದ್ದುಪಡಿ ಮಾಡಿ ನಂತರ ಕ್ರಮವಹಿಸಬೇಕಾಗುತ್ತದೆ. |
| ಆ) | ಆಂಗ್ಲ ಭಾಷಾ ಜಿಪಿಟಿ ಶಿಕ್ಷಕರಿಗೆ ಘಟಕದ ಒಳಗೆ ಅಥವಾ ಹೊರಗೆ ವರ್ಗಾವಣೆ ಹೊಂದಲು ಖಾಲಿ ಹುದ್ದೆಗಳ ಕೊರತೆ ಇದೆಯೇ; ಇದನ್ನು ಪರಿಹರಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳಾವುವು; | ಜಿಲ್ಲೆಯಲ್ಲಿ ಖಾಲಿ ಹುದ್ದೆಗಳ ಲಭ್ಯತೆಯ ಅನುಸಾರವಾಗಿ ಶಿಕ್ಷಕರು ವರ್ಗಾವಣೆ ಕೌನ್ಸಲಿಂಗ್‌ನಲ್ಲಿ ಸ್ಥಳ ಆಯ್ಕೆ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗುವುದು. |
| ಇ) | ರಾಜ್ಯ ಸರ್ಕಾರದ ಶಾಲೆಗಳಲ್ಲಿ ಆಂಗ್ಲ ಒಂದು ಕಡ್ಡಾಯ ಭಾಷೆಯಾಗಿರುವಾಗ 6-8ನೇ ತರಗತಿಗೆ ಇಂಗ್ಲಿಷ್ ಶಿಕ್ಷಕರ ನೇಮಕಕ್ಕೆ 150 ಹೆಚ್ಚು ಮಕ್ಕಳು ಇರಬೇಕೆಂಬ ನಿಬಂಧನೆಯಿಂದ ಎಲ್ಲಾ ಶಾಲೆಗಳಿಗೆ ಇಂಗ್ಲಿಷ್ ಶಿಕ್ಷಕರನ್ನು ನೇಮಕ ಮಾಡಲು ಸಾಧ್ಯವೇ; ಈ ತರಹದ ನಿಬಂಧನೆಗಳಿಂದ ಇಂಗ್ಲೀಷ್ ಶಿಕ್ಷಕರು ಇಲ್ಲದ ಕಾರಣ ಶಾಲೆಗಳಲ್ಲಿ ಮಕ್ಕಳ ದಾಖಲಾತಿ ಕಡಿಮೆ ಆಗುವುದಿಲ್ಲವೇ ಅಥವಾ ಶಾಲೆಗಳು ಮುಚ್ಚುವ ಹಂತಕ್ಕೆ ಬರುವುದಿಲ್ಲವೇ? (ವಿವರ ನೀಡುವುದು). | ಎಲ್ಲಾ ಶಾಲೆಗಳಿಗೆ ಆಂಗ್ಲ ಭಾಷಾ ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳಲು ಅವಕಾಶವಿರುವುದಿಲ್ಲ. ಆದಾಗ್ಯೂ ಶಾಲೆಯಲ್ಲಿ ಆಂಗ್ಲ ಭಾಷಾ ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳದಿದ್ದಲ್ಲಿ ಮಕ್ಕಳ ದಾಖಲಾತಿ ಕಡಿಮೆಯಾಗುವುದಿಲ್ಲ ಮತ್ತು ಅಂತಹ ಶಾಲೆಯನ್ನು ಮುಚ್ಚುವ ಪ್ರಮೇಯ ಉದ್ಭವವಾಗುವುದಿಲ್ಲ.<br><br>ಮುಂದಿನ ದಿನಗಳಲ್ಲಿ 6-8ನೇ ತರಗತಿಗಳಿಗೆ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿ ಸಮಯದಲ್ಲಿ ಹಂತ ಹಂತವಾಗಿ ಆಂಗ್ಲ ಭಾಷಾ ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳಲು ಕ್ರಮವಹಿಸಲಾಗುವುದು. |

**ಇಪಿ 50 ಪಿಎಂಎ 2024**

**(ಎಸ್. ಮಧು ಬಂಗಾರಪ್ಪ)**
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು